



ಕಣ್ಣು ಹಾಯಿಸಿದಷ್ಟು ದೂರ ಬೆಟ್ಟ ಬಯಲು, ಆಕಾಶ, ಹಸಿರ ದೃಶ್ಯವೈಭವ. ಇಂತಹ ಸೊಬಗಿನ ಸಿರಿಯನ್ನು ಕಣ್ತುಂಬಿಕೊಳ್ಳುವುದೇ ಒಂದು ಸೊಗಸು. ಹಸಿರು ಹಾದಿಯ ನಡುವೆ ಸಾಗುತ್ತ ಹೋದರೂ ಬೇರೊಂದು ಲೋಕದಲ್ಲಿ ನಾವಿದ್ದೇವೆ ಎಂಬ ಅನುಭವ. ಯಾವುದಪ್ಪಾ ಇಂತಹ ತಿರುಗಾಟದ ಪ್ರವಾಸಿ ಸ್ಥಳ ಅಂತಾ ಯೋಚಿಸಬೇಡಿ. ಆ ಪ್ರದೇಶ ಮತ್ತಾವುದೂ ಅಲ್ಲ. ಅದೇ ಕೀನ್ಯಾ ದೇಶದಲ್ಲಿರುವ ಚಹಾ ತೋಟಗಳ ಪ್ರದೇಶ. ಮಿನಿ ಸ್ವಿಟ್ಜರ್‌ಲೆಂಡ್ ಎನ್ನಬಹುದಾದ ಹಸಿರು ಸಿರಿವಂತ ಚಹಾ ಪ್ರದೇಶ. ತನುವಿಗೂ ಮನಸಿಗೂ ಮುದ ನೀಡುವ ತಂಪಾದ ಪರಿಸರ. ದೈನಂದಿನ ಜಂಜಾಟದಲ್ಲಿ ಬೆಂದು ನೊಂದ ಮನಗಳಿಗೆ ವಿಶ್ರಾಂತಿಯ ಸವಿ ಉಣಿಸುವ ರಮಣೀಯ ತಾಣ.

ಚುಮುಚುಮು ಚಳಿ, ಪ್ರಶಾಂತವಾದ ಗಾಳಿ, ಹಸಿರನ್ನು ಸಂಪೂರ್ಣವಾಗಿ ಆವರಿಸಿರುವಂತಹ ಪ್ರಕೃತಿಯ ಸೌಂದರ್ಯ, ಕಣ್ಣಿಗೆ ಸಾಕು ಎನಿಸುವಷ್ಟು ಕಾಣುವ ಚಹಾ ತೋಟ. ಪ್ರಕೃತಿ ಆರಾಧನೆಗೆ ಹೇಳಿ ಮಾಡಿಸಿದ ತಾಣ. ಸಾವಿರಾರು ಎಕರೆ ಪ್ರದೇಶದಲ್ಲಿ ಚಹಾ ಗಿಡಗಳ ನರ್ತನ. ಇವನ್ನು ನೋಡಿದ ಕೂಡಲೇ ಎಂತಹವರಿಗೂ ಆ ಚಹಾ ತೋಟದ ಮಧ್ಯದಲ್ಲೊಂದು ಮನೆ ಮಾಡಿಕೊಂಡು ಕಾಲ ಕಳೆಯಬೇಕೆಂದೆನಿಸುತ್ತದೆ!

ವಿಭಿನ್ನ ರೀತಿಯಲ್ಲಿ ವಿನ್ಯಾಸಗೊಳಿಸಿದ ಚಹಾ ತೋಟಗಳನ್ನು ನೋಡುತ್ತಾ ನಿಲ್ಲುವುದೇ ಒಂದು ಸೊಗಸಾದ ಅನುಭವ. ಸೊಗಸಾಗಿ ಕತ್ತರಿಸಿದ ಆ ಚಹಾ ಗಿಡಗಳು ತಮ್ಮ ಚಿಗುರನ್ನು ಕೀಳಲು ಬರುವ ಕಾರ್ಮಿಕರಿಗೆ ಸ್ವಾಗತವನ್ನು ಕೋರುವಂತೆ ಕಾಣಿಸುತ್ತವೆ. ಬೆನ್ನಲ್ಲೊಂದು ಬುಟ್ಟಿ, ತಲೆಯಲ್ಲೊಂದು ಶಾಲು, ಅವಸರವಸರವಾಗಿ ಚಿಗುರನ್ನು ಕೀತ್ತು ಬುಟ್ಟಿ ತುಂಬಿಸುವ ಅವರ ಕಾಯಕ ಪ್ರೀತಿ ನಿಜಕ್ಕೂ ಅನನ್ಯ.

ಚಹಾ ತೋಟಗಳಲ್ಲಿ ಕೆಲವೆಡೆ ಸಮತಟ್ಟಾದ ಭೂಮಿಯು ಅದ್ಭುತ ನೋಟವನ್ನು ಕರುಣಿಸುತ್ತದೆ. ದಟ್ಟ ಹಸಿರಿನಿಂದ ಆವರಿಸಿರುವ ಇಳಿಜಾರು ಪ್ರದೇಶಗಳು ಪ್ರವಾಸಿಗರ ಉತ್ಸಾಹವನ್ನು ಇಮ್ಮಡಿಗೊಳಿಸುತ್ತವೆ. ಚಹಾ ತೋಟಗಳ ನಡುವೆ ನಡೆಯುತ್ತಾ, ಸುವಾಸನೆಯುಕ್ತ ಎಲೆಗಳ ಪರಿಮಳ ಆಘ್ರಾಣಿಸುತ್ತಾ ನಡೆದಾಡುವಾಗ ಮನದ ಎಲ್ಲ ಒತ್ತಡಗಳು ಕರಗಿ, ಅಪರಿಮಿತ ಆಹ್ಲಾದ ಉಂಟಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಕೀನ್ಯಾದಲ್ಲಿ ಮಣ್ಣಿನ ಫಲವತ್ತತೆ, ಸಾಕಷ್ಟು ಮಳೆ, ಸೂರ್ಯನ ಬೆಳಕು ಇರುವುದರಿಂದ ಕೃಷಿ ಉತ್ಪಾದನೆಗೆ ಆಕರ್ಷಕ ಸ್ಥಳವೆಂದು ತಿಳಿದ ಬ್ರಿಟಿಷರ ಗುಂಪೊಂದು 19ನೇ ಶತಮಾನದ ಆರಂಭದಲ್ಲಿ ಕೀನ್ಯಾದ ಮೊಂಬಾಸ ಬಂದರಿಗೆ ಬಂದು ನೆಲೆಗೊಂಡಿತಂತೆ. ಸ್ಥಳೀಯರಿಂದ ಸುಮಾರು 1 ಲಕ್ಷ 60 ಸಾವಿರ ಎಕರೆಯಷ್ಟು ಭೂಮಿ ವಶಪಡಿಸಿಕೊಂಡ ಬ್ರಿಟಿಷರು ತಮ್ಮ ಸಾಮ್ರಾಜ್ಯವನ್ನು ಅಲ್ಲಿ ಸ್ಥಾಪಿಸಿದರು. ಬ್ರಿಟನ್ ನಿವಾಸಿ ಜಿಡಬ್ಲ್ಯೂಎಲ್ ಕೈನೇ ಎಂಬಾತ 1903ರಲ್ಲಿ ಭಾರತದಿಂದ ಕೀನ್ಯಾಗೆ ಚಹಾವನ್ನು ತಂದು ಪರಿಚಯಿಸಿದ. ಅಲ್ಲಿಂದ ಮುಂದೆ ವರ್ಷದಿಂದ ವರ್ಷಕ್ಕೆ ಚಹಾ ಹರವು ಹೆಚ್ಚಾಗುತ್ತಾ ಹೋಯಿತು.

ಕೀನ್ಯಾದ ಕಿಯಾಂಬುವಿನ ಲಿಮುರುವಿನಲ್ಲಿ ಆರಂಭವಾದ ಚಹಾ ಕೃಷಿ, ನಂತರ ದೇಶದ ಬೇರೆ ಭಾಗಗಳಿಗೂ ವಿಸ್ತರಿಸಿತು. ಸ್ವಾತಂತ್ರ್ಯಾ ನಂತರ ಕೀನ್ಯಾದ ಸ್ಥಳೀಯರು ಚಹಾ ತೋಟಗಳನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿದ್ದಾರೆ. ಇಲ್ಲಿನ ಚಹಾ ತೋಟಗಳು ದೇಶದ ಆರ್ಥಿಕತೆಗೆ ಮಾತ್ರವಲ್ಲದೆ, ಪ್ರವಾಸೋದ್ಯಮಕ್ಕೂ ಕೊಡುಗೆ ನೀಡುತ್ತಿವೆ.

ಪ್ರಸ್ತುತ 4,000 ಚದರ ಮೈಲಿಗಳಿಗಿಂತಲೂ ಹೆಚ್ಚು ಪ್ರದೇಶಗಳಲ್ಲಿ ಚಹಾ ಗಿಡಗಳನ್ನು ಬೆಳೆಯುತ್ತಾರೆ. ಕೀನ್ಯಾದ ಕೆಳ ಭೂಮಿಯು ಚಹಾ ಬೆಳೆಯಲು ತುಂಬಾ ಬಿಸಿಯಾಗಿರುತ್ತದೆ. ಆದ್ದರಿಂದ ಸಮುದ್ರಮಟ್ಟದಿಂದ ನಾಲ್ಕರಿಂದ ಏಳೂವರೆ ಸಾವಿರ ಅಡಿಗಳ ಎತ್ತರದಲ್ಲಿ ಚಹಾ ಗಿಡಗಳನ್ನು ಬೆಳೆಸಲಾಗುತ್ತದೆ. ರಿಫ್ಟ್ ಕಣಿವೆಯ ಪಶ್ಚಿಮ ಭಾಗದಲ್ಲಿ ಬೊಮೆಟ್, ಕೆರಿಚೊ, ಕಿಸ್ಸೈ, ನಂದಿ, ನೈಮಿರಾ ಮತ್ತು ಸೊತಿಕ್ಸ, ರಿಫ್ಟ್ ಕಣಿವೆಯ ಪೂರ್ವ ಭಾಗದಲ್ಲಿ ಮೇರು, ಮುರುಂಗಾ ಮತ್ತು ನ್ಯಾರಿ ಹಾಗೆಯೇ ಲಿಮುರು, ಕಿಯಾಂಬು, ಥೀಕಾ ಮತ್ತು ನೈರೋಬಿಯ ಸುತ್ತಮುತ್ತ ಬೆಳೆಯುತ್ತಾರೆ.

ಕೀನ್ಯಾದಲ್ಲಿ ಸುಮಾರು 45 ಬಗೆಯ ಚಹಾ ತಳಿಗಳನ್ನು ಬೆಳೆಯಲಾಗುತ್ತದೆ. ಕೆನ್ನೇಲಿ ಚಹಾ ಉತ್ಪಾದನೆಯಲ್ಲಿ ಮಾತ್ರ ಕೀನ್ಯಾ ಜಗತ್ತಿನಲ್ಲಿಯೇ ಮೊದಲ ಸ್ಥಾನದಲ್ಲಿದೆ. ಭಾರತ ಎರಡನೇ ಸ್ಥಾನದಲ್ಲಿದೆ. ಅಂದಹಾಗೆ, ಕೀನ್ಯಾದ ಕೆನ್ನೇಲಿ ಚಹಾದ ಮೂಲವೇ ನಮ್ಮ ಅಸ್ಸಾಂ. ಚಹಾ ಉತ್ಪಾದನೆ ಮತ್ತು ರಫ್ತು ಮಾಡುವುದರಲ್ಲಿ ಚೀನಾ, ಭಾರತ, ಶ್ರೀಲಂಕಾದ ನಂತರದ ಸ್ಥಾನ ಕೀನ್ಯಾದ್ದು.

ಕೀನ್ಯಾಗೆ ಬರುವ ಪ್ರವಾಸಿಗರು ನೈರೋಬಿಯ ಸುತ್ತಮುತ್ತಲ ಪ್ರದೇಶಗಳಾದ ಲಿಮುರು, ಥೀಕಾ, ಕೆರಿಚೊ ಮುಂತಾದ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿ ಸಾವಿರಾರು ಎಕರೆಯಲ್ಲಿ ಬೆಳೆದಿರುವ ಚಹಾ ತೋಟಗಳನ್ನು ನೋಡಿ ಆನಂದಿಸಬಹುದು.